**ಒ ಎಸ್ ನಂ. 53/2022**
**ಪಿ ಡಬ್ಲ್ಯೂಃ 01**

**ದಿಃ 22-08-2025 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ** ಶ್ರೀ ಐ ಬಿ ಎಚ್ **ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದು, ಅದರಲ್ಲಿ ಬರೆದ ಎಲ್ಲಾ ಸಂಗತಿಗಳು ಸರಿಯಾಗಿದ್ದು, ಸತ್ಯವಾಗಿರುತ್ತವೆ.

ಕಲ್ಲಪ್ಪ ಇವರ ಜನನ ಪ್ರಮಾಣ ಪತ್ರವನ್ನು ನಿಪಿ-1, ಹನಮಂತ ಇವರ ಜನನ ಪ್ರಮಾಣ ಪತ್ರವನ್ನು ನಿಪಿ-2, ವ್ಯಾಸಂಗ ಪ್ರಮಾಣ ಪತ್ರಗಳನ್ನು ನಿಪಿ-3 ರಿಂದ 5, ಪಹಣಿ ಪತ್ರಿಕೆಗಳನ್ನು ನಿಪಿ-6 ರಿಂದ 11, ಮ್ಯುಟೇಷನ ರಜಿಸ್ಟರಗಳನ್ನು ನಿಪಿ-12 ಮತ್ತು 13, ಕ್ರಯ ಪತ್ರದ ದೃಡಿಕೃತ ಪ್ರತಿಗಳನ್ನು ನಿಪಿ-14 ರಿಂದ 16, ಮ್ಯುಟೇಷನ ರಜಿಸ್ಟರಗಳನ್ನು ನಿಪಿ-17 ರಿಂದ 19, ಗ್ರಾಮ ಪಂಚಾಯತಿವರು ನೀಡಿದ ಪ್ರಮಾಣ ಪತ್ರವನ್ನು ನಿಪಿ-20, ನಿಂಗಪ್ಪ ಇವರ ಮರಣ ಪ್ರಮಾಣ ಪತ್ರವನ್ನು ನಿಪಿ-21, ಮಲ್ಲವ್ವ ಇವರ ಮರಣ ಪ್ರಮಾಣ ಪತ್ರವನ್ನು ನಿಪಿ-22, ಬಸಪ್ಪ ಇವರ ಮರಣ ಪ್ರಮಾಣ ಪತ್ರವನ್ನು ನಿಪಿ-23, ನೀಲಪ್ಪ ಇವರ ಮರಣ ಪ್ರಮಾಣ ಪತ್ರವನ್ನು ನಿಪಿ-24, ವಂಶಾವಳಿ ಪತ್ರವನ್ನು ನಿಪಿ-25, ಅಸಲ ದಾವಾ ನಂ 59/2020 ರ ಆರ್ಡರ ಶೀಟನ್ನು ನಿಪಿ-26, ರಾಜಿ ಅರ್ಜಿ ಪ್ರತಿಯನ್ನು ನಿಪಿ-27, ತಿದ್ದುಪಡಿ ವಾದ ಪತ್ರವನ್ನು ನಿಪಿ-28, ವಾದ ಪತ್ರವನ್ನು ನಿಪಿ-29, 1 ನೇ ಪ್ರತಿವಾದಿಯ ಪ್ರತಿವಾದ ಪತ್ರವನ್ನು ನಿಪಿ-30, ಡಿಕ್ರಿ ಪ್ರತಿಯನ್ನು ನಿಪಿ-31, ಉಪನೋಂದಣಾಧಿಕಾರಿಗಳಿಗೆ ಸಲ್ಲಿಸಿದ ತಕರಾರು ಅರ್ಜಿಯನ್ನು ನಿಪಿ-32, ಮತದಾರರ ಪಟ್ಟಿಯನ್ನು ನಿಪಿ-33, ಆದಾಯ ಮತ್ತು ಜಾತಿ ಪ್ರಮಾಣ ಪತ್ರವನ್ನು ನಿಪಿ-34 ಮತ್ತು 36 ಎಂದು ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರುತ್ತಿದ್ದು, ಕಾಲಾವಕಾಶ ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**